ಗೋಕಾಕ್ ತಾಲ್ಲೂಕಿನಲ್ಲಿ ಒಂದು ಆದಿವಾಸಿ ಕಲ್ಯಾಣ ಕಾಲೋನಿ ತೆರೆಯುವ ಬಗ್ಗೆ

೧೭೪೩. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ತಾಲ್ಲೂಕಿನಲ್ಲಿ ನಗರದಲ್ಲಿ ಆದಿವಾಸಿ ಜನಸಂಖ್ಯೆ ಹೆಚ್ಚಾಗಿ ಇರುವುದರಿಂದ ಈ ನಗರದಲ್ಲಿ ಒಂದು ಆದಿವಾಸಿ ಕಲ್ಯಾಣ ಕಾಲೋನಿಯನ್ನು ತೆರೆಯುವ ಉದ್ದೇಶವೇನಾದರೂ ಸರ್ಕಾರದವರಿಗೆ ಇದೆಯೇ?

ಆ) ಹಾಗಿಲ್ಲದಿದ್ದಲ್ಲಿ ಸದರಿ ಜನಾಂಗದ ಜನ ಸಂಖ್ಯೆ ಆಧಾರದ ಮೇರೆಗೆ ನಗರದಲ್ಲಿ ಒಂದು ಆದಿವಾಸಿ ಕಾಲೋನಿಯನ್ನು ಪ್ರಾರಂಭಿಸಿದರಲು ಇರುವ ತೊಂದರೆಗಳೇನು?

ಇ) ಹಾಗಿದ್ದಲ್ಲಿ ಸದರಿ ನಗರದಲ್ಲಿ ಸದರಿ ಕಾಲೋನಿಯನ್ನು ಆರಂಭಿಸಲು ಸರ್ಕಾರದವರು ಕ್ರಮಕೈಗೊಳ್ಳುವರೆ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ರಾಜ್ಯದಲ್ಲಿ ಆದಿವಾಸಿ ಕಲ್ಯಾಣ ಕಾಲೋನಿ ಸ್ಥಾಪಿಸುವ ಯೋಜನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ದೇವದಾಸಿಯಂವರ ಧನ ಸಹಾಯಂ ಕುರಿತು.

೧೫೫೪. ಶ್ರೀ. ಬಿ. ಜಿ. ಜಮುಖಂಡಿ (ಮುಧೋಳ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ, ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ ದೇವದಾಸಿಯವರ ಸಂಖ್ಯೆ ಎಷ್ಟು?

ಆ) ಇಡೀ ರಾಜ್ಯದಲ್ಲಿ ಎಷ್ಟು ಜನ ದೇವದಾಸಿಯರ ಲಗ್ನವಾಗಿದೆ?

ಇ) ಪ್ರತಿಯೊಬ್ಬರಿಗೆ ಸರ್ಕಾರದವರು ಎಷ್ಟು ಧನ ಸಹಾಯ ನೀಡಿದ್ದಾರೆ?

ಈ) ಧನ ಸಹಾಯ ಪಡೆಯದ ದೇವದಾಸಿಯರ ಸಂಖ್ಯೆ ಎಷ್ಟು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಒಟ್ಟು ಗುರುತಿಸಲಾದ ದೇವದಾಸಿಯವರ ಸಂಖ್ಯೆ ಹೀಗಿದೆ.—

ಬಿಜಾಪುರದಲ್ಲಿ	—೧೦೨೧
ಬೆಳಗಾಂನಲ್ಲಿ	—೨೮೫೨
ಗುಲ್ಬರ್ಗಾದಲ್ಲಿ	— ೮೧

ಆ) ೮೦ ದೇವದಾಸಿಯವರಿಗೆ ವಿವಾಹವಾಗಿದೆ.

ಇ) ದಂಪತಿಗಳಿಗೆ ಪ್ರತಿಯೊಬ್ಬರಿಗೆ ೩,೦೦೦ ರೂಪಾಯಿ ಧನ ಸಹಾಯ ಕೊಡಲಾಗಿದೆ.

ಈ) ೬ ದೇವದಾಸಿ ದಂಪತಿಗಳಂ ಇನ್ನೂ ಧನ ಸಹಾಯ ಪಡೆದಿಲ್ಲ.

ಸರ್ಕಾರಿ ನಾಕರರ ಅವಧಿಪೂರ್ವ ವರ್ಗಾವಣೆ ಬಗ್ಗೆ

೧೬೭೮ (ಬಿ). ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೫ನೇ ಸಾಲಿನ ಏಪ್ರಿಲ್ ೩೦ನೇ ದಿನಾಂಕದ ನಂತರ ಈತನಕ ಎಷ್ಟು ಅವಧಿ ಪೂರ್ವ ವರ್ಗಾವರ್ಗಿಗೆ ಅನುಮತಿ ನೀಡಲಾಗಿದೆ?